was lack of accommodation. Because of that the rooms were constructed and we have already requested the municipal corporation to construct some rooms for the Marathi school. Even for Kannada school it was the corporation that constructed three rooms and we get it on rent.

SRI B. B. SAYANAK.—We know that the corporation has constructed this building on the ground of the Marathi school. This land and school was given by the erstwhile Kurdwal State and there was an agreement between the State and the school. How did the Karnataka Government construct a building for Kannada school on the land belonging to Marathi school? The Government is favourable to Kannada students and not to Marathi students.

SRI B. SUBBAYYA SHETTY.—It is rather very unfortunate that these references are made. All are Karnataka students and both are treated equally. When we find shortage of accommodation we have to accommodate. That is all. We have already moved the Corporation to construct eight rooms in the adjoining land and they will be provided. Let us not make much fuss about it.

SRI B. B. SAYANAK.—Sir, the Government of Karnataka and the Corporation of Belgaum City are intentionally careless about marathi boys because many schools have no proper buildings?

SRI B. SUBBAYYA SHETTY.—I deny that allegation that we are partial to anybody.

SRI P. A. PAWASHE.—Whether it is a fact that the new school building where the Kannada school is accommodated was constructed for the Marathi school?

SRI B. SUBBAYYA SHETTY.—No, it is not so.

MR. SPEAKER.—I with-hold Q. No. 127.

Bus Service in Bangalore

134. SRI T. R. SHAMANNA (Basavanagudi).—Will the Minister for Transport and Tourism be pleased to state:—

(*a*) the number of buses that are being run by Bangalore Transport Service;

(*b*) whether all the areas of the city are covered by bus service;

(*c*) whether bus service will be given to areas like Banashankari II Stage, Thyagarajanagar;

(*d*) the steps being taken to check over crowding in buse particularly in peak hours;

(*e*) what steps that Govt. would take to get additional buses to meet the growing needs of the travelling public ?

SRI R. GUNDU RAO (Minister for Transport and Tourism).—

(*a*) 498 as at end of March 1978.

(*b*) All the areas of the city having roads fit for mass transportation are served by the city services.

(*c*) B.T.S. has provided bus services from Banashankari II Stage to Shivajinagar, City Market and Kempegowda Circle. The residents of Thyagarajanagar are utilising at present the B.T.S. services operated from N. R. Colony, Banashankari II Stage and Hanumanthanagar. B.T.S. could not plan its services through narrow and congested roads in the Thyagarajanagar area.

(*d*) By adding more number of buses to B.T.S. fleet and operating more number of schedules.

(*e*) The proposals are on hand by the KSRTC to and abouts 50 vehicles to the B.T.S. fleet during 78–79 to ease transport problem in Bangalore City to some extent.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಮಂತ್ರಿಯವರು ಈ ಬಿ.ಟಿ.ಎಸ್. ಬಸ್‌ಗಳ ಅವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ? ಉತ್ತರದಲ್ಲಿ ಹೇಳಿರತಕ್ಕ ಪ್ರಕಾರ ಒಟ್ಟು ೪೯೮ ಬಸ್‌ಗಳನ್ನು ಓಡಿಸುತ್ತಿದ್ದೇವೆಂದು ಹೇಳಿದ್ದೀರಿ. ಈಗ ಕೆಟ್ಟುಹೋಗಿರುವ ಬಸ್‌ಗಳ ಬಗ್ಗೆ ಏನು ಮಾಡುತ್ತೀರಿ? ಈಗ ಚಾಲ್ತಿಯಲ್ಲಿರುವ ಬಸ್‌ಗಳ ಸಂಖ್ಯೆ ಎಷ್ಟು ಮತ್ತು ಸಿಕ್ ಬಸ್‌ಗಳ ಸಂಖ್ಯೆ ಎಷ್ಟು ಎಂಬುದನ್ನು ಹೇಳುತ್ತೀರಾ ?

† ಶ್ರೀ ಆರ್. ಗುಂಡೂರಾವ್.—ಒಟ್ಟು ೪೯೮ ಬಸ್‌ಗಳನ್ನು ನಾವು ಓಡಿಸುತ್ತಿದ್ದೇವೆಂದು ನಾನು ಉತ್ತರದಲ್ಲಿ ತಿಳಿಸಿದ್ದೇನೆ, ಮತ್ತು ಒಟ್ಟು ಎಷ್ಟು ಬಸ್‌ಗಳು ನಿಲ್ಲುತ್ತವೆ ಎನ್ನುವುದರ ಬಗ್ಗೆ ಅದು ಇಷ್ಟೇ ಬಸ್‌ಗಳು ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ದಿನ ೫೫ ಬಸ್ ನಿಲ್ಲಬಹುದು ಇನ್ನೊಂದು ದಿವಸ ೧೦ ಬಸ್ ನಿಲ್ಲಬಹುದು, ಮತ್ತೊಂದು ದಿವಸ ೧೫ ಬಸ್ ನಿಲ್ಲಬಹುದು. ಆದ್ದರಿಂದ ಒಂದು ದಿನಕ್ಕೆ ಇಷ್ಟೇ ಬಸ್ ನಿಲ್ಲುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಮನುಷ್ಯರಿಗೆ ಏನೇನು ತೊಂದರೆಗಳಾಗುತ್ತವೆಂದು ಹೇಳುವುದಕ್ಕೆ ಬರುವುದಿಲ್ಲ ಹಾಗೆಯೇ ಒಂದು ದಿನಕ್ಕೆ ಎಷ್ಟು ಬಸ್‌ಗಳಿಗೆ ಏನೇನು ತೊಂದರೆಗಳಾಗುತ್ತವೆಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ ಬಸ್‌ಗಳಿಂದ ನಿಮ್ಮ ಸೌಕರ್ಯ ಚೆನ್ನಾಗಿ ಮಾಡಬೇಕು ಎಂದು ಹೇಳತಕ್ಕಂಥ ಉದ್ದೇಶ ಕಾರ್ಪೊರೇಷನ್‌ಗೆ ಇದೆ ಮತ್ತು ಸರ್ಕಾರಕ್ಕೂ ಇದೆ. ಆ ದೃಷ್ಟಿಯಿಂದ ಇನ್ನೂ ಹೆಚ್ಚು ಬಸ್‌ಗಳನ್ನು ಹಾಕಬೇಕೆಂದು ಈಗಾಗಲೇ ಕಾರ್ಪೊರೇಷನ್ ತೀರ್ಮಾನ ಮಾಡಿದೆ. ಸುಮಾರು ೫೦ ಬಸ್‌ಗಳನ್ನು ಜಾಸ್ತಿ ಬೆಂಗಳೂರು ನಗರದಲ್ಲಿ ಓಡಿಸಬೇಕೆಂದು ಒಂದು ಆಲೋಚನೆ ಕಾರ್ಪೊರೇಷನ್‌ಗೆ ಇದೆ.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ಅನೇಕ ಪ್ರಯಾಣಿಕರು ಪುಟ್‌ಬೋರ್ಡ್‌ಮೇಲೆ ನಿಂತುಕೊಂಡು ಪ್ರಯಾಣ ಮಾಡುವುದರಿಂದ ಬಸ್‌ಗಳಲ್ಲಿ ಒಂದಕ್ಕೆರಡರಷ್ಟು ಭರ್ತಿಯಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಇದೂ ಅಲ್ಲದೆ ಪ್ರಯಾಣಿಕರು ಬಸ್‌ಸ್ಟಾಂಡ್‌ನಲ್ಲಿ ಗಂಟೆಗಟ್ಟಲೆ ನಿಲ್ಲುತಕ್ಕಂಥ ಪರಿಸ್ಥಿತಿಯೂ ಇದೆ. ಇದನ್ನು ತಾವು ಖುದ್ದಾಗಿ ಪರಿಶೀಲನೆ ಮಾಡಿ ಆದರ ಬಗ್ಗೆ ಆದಷ್ಟು ಬೇಗ ಕಾರ್ಯಕ್ರಮವನ್ನು ತೆಗೆದುಕೊಂಡು ಪ್ರಯಾಣಿಕರಿಗೆ ಇನ್ನೂ ಹೆಚ್ಚಿನ ಸೌಕರ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಈ ವಿಷಯು ಈಗಾಗಲೇ ಸರ್ಕಾರದವರ ಗಮನದಲ್ಲಿದೆ. ಈ ಬಗ್ಗೆ ಆದಷ್ಟು ಬೇಗ ಕಾರ್ಯಕ್ರಮ ಕೈಗೊಂಡು ಪ್ರಯಾಣಿಕರಿಗೆ ಸೌಕರ್ಯವನ್ನು ಮಾಡಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಯವರು ಬಿ.ಟಿ.ಎಸ್. ಬಸ್‌ಗಳ ಓಡಾಟದ ವ್ಯವಸ್ಥೆಯನ್ನು ನಗರ ಕಾರ್ಪೊರೇಷನ್‌ಗೆ ವಹಿಸಿಕೊಡಬೇಕೆನ್ನುವ ಯೋಚನೆ ಇದೆಯೆಂದು ಹೇಳಿದ್ದರು. ಆದರೆ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೇ ?

ಶ್ರೀ ಆರ್. ಗುಂಡೂರಾವ್.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ. ಅದಕ್ಕೆ ಬೇರೆ ಪಾಲಿಸಿ ನೀತಿ ಇದೆ. ಅದರ ಮೇಲೆ ಬೇರೆ ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಮಂತ್ರಿಯವರು ಕೆಲವು ದಿನಗಳ ಹಿಂದೆ ಖಾಸಗೀ ಬಸ್‌ಗಳನ್ನು ಓಡಿಸುವುದರ ಬಗ್ಗೆ ಯೋಚನೆ ಮಾಡುತ್ತೇವೆಂದು ಸೂಚನೆಯನ್ನು ಕೊಟ್ಟಿದ್ದರು. ಈಗಾಗಲೇ ಕಲ್ಕತ್ತದಲ್ಲಿ ಮತ್ತು ಡೆಲ್ಲಿಯಲ್ಲಿ ಮಿನಿ ಬಸ್‌ಗಳನ್ನು ಆನ್‌ಎಂಪ್ಲಾಯ್ಡ್ ಗ್ರಾಜುಯೇಟ್ಸ್‌ಗೆ ಕೊಟ್ಟು ಆ ಬಸ್‌ಗಳನ್ನು ಓಡಿಸುತ್ತಿದ್ದಾರೆ, ಅದರಂತೆ ಇಲ್ಲಿ ಪ್ರೈವೇಟ್ ಬಸ್‌ಗಳನ್ನು ಓಡಿಸುವುದರಿಂದ ಬಸ್‌ಗಳು ಹೆಚ್ಚಾಗುತ್ತವೆ ಮತ್ತು ಪ್ರಯಾಣಿಕರಿಗೂ ಅದರಿಂದ ಅನುಕೂಲವಾಗುತ್ತದೆ. ಈ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಆರ್. ಗುಂಡೂರಾವ್.—ಆದಷ್ಟು ಹೆಚ್ಚಿನ ರೀತಿಯಲ್ಲಿ ಪ್ರಯಾಣಿಕರಿಗೆ ಸೌಕರ್ಯ ಮತ್ತು ಸೌಲಭ್ಯವನ್ನು ಒದಗಿಸಿಕೊಡಬೇಕೆಂಬುದೇ ಸರ್ಕಾರದ ನೀತಿಯಾಗಿದೆ. ಈ ದಿಶೆಯಲ್ಲಿ ಉನ್ನತವಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ. ಆದಷ್ಟು ಬೇಗ ಆದನ್ನೆಲ್ಲ ಕೈಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಬಿ. ಎನ್. ಬಾಚೇಗೌಡ.—ಈ ದಿನ ಹೆಚ್ಚು ಜನ ಕಂಡಕ್ಟರುಗಳು ಇಲ್ಲದೇ ಆಯಾ ಡಿಪೋಗಳಲ್ಲಿ ಅನೇಕ ಬಸ್‌ಗಳು ನಿಂತು, ಟ್ರಿಪ್ ಕ್ಯಾನ್ಸಲ್ ಆಗಿ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಈ ವಿಚಾರ ಮಾನ್ಯ ಮಂತ್ರಿಯವರ ಗಮನಕ್ಕೆ ಬಂದಿದೆಯೇ? ಅದೂ ಅಲ್ಲದೇ ಹೆಚ್ಚು ಜನ ಡ್ರೈವರ್‌ಗಳು ಇಲ್ಲದೇ ಸುಮಾರು ೮-೧೦ ಬಸ್‌ಗಳು ಒಂದೊಂದು ಡೆಪೋದಲ್ಲಿ ನಿಂತು ರೂಟ್ ಬಸ್‌ಗಳ ಸಂಚಾರಕ್ಕೆ ತೊಂದರೆಯಾಗಿದೆ. ಇದೂ ಸಹ ಮಾನ್ಯ ಮಂತ್ರಿಯವರ ಗಮನಕ್ಕೆ ಬಂದಿದೆಯೇ ? ಇವನ್ನು ಸರಿಪಡಿಸುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್ ಗುಂಡೂರಾವ್.—ಅದು ನನ್ನ ಗಮನಕ್ಕೆ ಬಂದಿಲ್ಲ. ಅಂತಹ ಪ್ರಕರಣಗಳು ಯಾವು ದಾದರೂ ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಬಸ್‌ಗಳಲ್ಲಿ ಕಂಡಕ್ಟರುಗಳಲ್ಲದೇಕರು ಪ್ರಯಾಣಿಕರ ಬಗ್ಗೆ ಸೌಜನ್ಯದಿಂದ ನಡೆದುಕೊಳ್ಳದೇ ಇರತಕ್ಕಂಥಾದ್ದರ ಬಗ್ಗೆ ಮತ್ತು ಹೆಚ್ಚಿನ ಪ್ರಯಾಣಿಕರು ಟಿಕೆಟುಗಳನ್ನು ತೆಗೆದುಕೊಳ್ಳದೇ ಪ್ರಯಾಣ ಮಾಡತಕ್ಕಂಥಾದ್ದರ ಬಗ್ಗೆ ಏನಾದರೂ ತಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ? ತಾವು ಹೇಳಿದ ಹಾಗೆ ಈ ೫೦ ಬಸ್‌ಗಳನ್ನು ವಿಂಡಿತವಾಗಿಯೂ ಒಪಗಿಸಿಕೊಡುವುದಕ್ಕೆ ಯಾವುದಾದರೂ ವಿಚಿತವಾದ ಬೇಳೆಯನ್ನು ಗೊತ್ತುಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಆರ್. ಗುಂಡೂರಾವ್.—ದೂರುಗಳು ಬಂದಹಾಗೆ ಅವುಗಳನ್ನು ಪರಿಶೀಲಿಸುತ್ತೇವೆ. ಆ ತರಹ ದೂರುಗಳನ್ನೇನಾದರೂ ತಾವು ಕೊಟ್ಟರೆ ಸಂಬಂಧಪಟ್ಟವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಎಸ್. ಪ್ರಮೀಳಾ. - ಮಾನ್ಯ ಮಂತ್ರಿಯವರು ಕಂಡಕ್ಟರುಗಳು ಬಿ.ಟಿ.ಎಸ್. ಬಸ್‌ಗಳಲ್ಲಿ ಸರಿಯಾಗಿ ನಡೆದುಕೊಳ್ಳುತ್ತಿಲ್ಲ ಎಂದು ಹೇಳಿರುವುದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ ಮತ್ತು ಮಾನ್ಯ ಮಂತ್ರಿಯವರೂ ಈ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ಬಗ್ಗೆ ನನಗೆ ಏನು ಅನ್ನಿಸುತ್ತದೆ ಎಂದರೆ ೧೫೦೦ ಜನ ಕಂಡಕ್ಟರುಗಳು ಅವರುಗಳಿಗೆ ಕೆಲಸ ಇಲ್ಲದೇ ಪ್ರಾಬ್ಲಮ್ಸ ಬೆಳಗ್ಗೆ ಕೋರ್ಟಿಗೆ ಹೋಗುತ್ತಾ ಇರುವುದನ್ನು ನಾನು ನೋಡಿದ್ದೇನೆ. ಇದಕ್ಕೆ ಏನಾದರೂ ಕಾರಣವಿದೆಯೇ ? ಇದು ನನ್ನ ಮೊದಲನೇ ಪ್ರಶ್ನೆ. ನಾನು ೨ನೇ ಪ್ರಶ್ನೆಯನ್ನು ಕೇಳಬೇಕು. ನನ್ನ ಮೊದಲನೇ ಪ್ರಶ್ನೆಗೆ ತಾವು ಉತ್ತರ ಕೊಡುತ್ತೀರೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಆರ್. ಗುಂಡೂರಾವ್.—ಕೋರ್ಟ್‌ನಲ್ಲಿ ಇರುವ ಪ್ರಶ್ನೆ ಕಾನೂನಿಗೆ ಸಂಬಂಧಪಟ್ಟ ಪ್ರಶ್ನೆ. ಆದ್ದರಿಂದ ಆದರ ಬಗ್ಗೆ ಈಗ ಹೇಳುವುದಕ್ಕೆ ಬರುವುದಿಲ್ಲ.

ಶ್ರೀಮತಿ ಎಸ್. ಪ್ರಮೀಳಾ.—ಇದು ಕೋರ್ಟಿನ ಪ್ರಶ್ನೆ ಅಲ್ಲ ಸ್ವಾಮಿ, ಅಲ್ಲಿರತಕ್ಕಂಥ ೧೫೦೦ ಜನ ಕಂಡಕ್ಟರುಗಳಿಗೆ ಕೆಲಸವಿಲ್ಲದೇ, ಬೇರೆ ಕಡೆ ಕೆಲಸಕ್ಕೆ ಹೋದರೆ ಏನಾಗುತ್ತದೋ ಎಂಬ ಪೆದರಿಕೆಯಿಂದ ಬೇರೆ ಕಡೆ ಕೆಲಸಕ್ಕೆ ಹೋಗದೇ ಈ ಬಿ.ಟಿ.ಎಸ್‌ನಲ್ಲೂ ಕೆಲಸ ಮಾಡದೇ ಇರುವುದು ತಪ್ಪು ಗಮನಕ್ಕೆ ಬಂದಿದೆಯೇ? ಹಾಗೆ ತಪ್ಪು ಗಮನಕ್ಕೆ ಬಂದಿದ್ದರೆ ಅವರಿಗೆ ಏನಾದರೂ ಪರಿಹಾರ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಈ ವಿಷಯಯಗಳೆಲ್ಲಾ ಕೋರ್ಟ್ ಮುಂದೆ ಇರುವ ದೆಶೆಯಿಂದ ಈ ಬಗ್ಗೆ ನಾನು ಏನೂ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್. - ಮಾನ್ಯ ಮಂತ್ರಿಯವರು ಬಿ.ಟಿ.ಎಸ್. ಕಂಡಕ್ಟರುಗಳು ಸೌಜನ್ಯದಿಂದ ವರ್ತಿಸುತ್ತಿಲ್ಲ ಎಂಬ ಬಗ್ಗೆ ದೂರುಗಳು ಬಂದಿಲ್ಲ, ಆ ತರಹ ದೂರುಗಳು ಬಂದಹಾಗೆ ಆದನ್ನು ನೋಡುತ್ತೇವೆ ಎಂದು ಹೇಳಿದರು. ಆದರೆ ಬಿ.ಟಿ.ಎಸ್. ಬಸ್‌ಗಳ ಕಾರ್ಯ ನಿರ್ವಹಿಸತಕ್ಕಂಥ ಚಾಲಕರು ಮತ್ತು ಕಂಡಕ್ಟರುಗಳು ಪ್ರಯಾಣಿಕರ ವಿಷಯದಲ್ಲಿ ಸರಿಯಾದ ಶಿಸ್ತಿನಿಂದ ಮತ್ತು ಸೌಜನ್ಯದಿಂದ ವರ್ತಿಸತಕ್ಕಂಥ ವಿಚಾರದಲ್ಲಿ ಒಂದು ಸರ್ವಕಾಲಿಕವಾದ ಶಿಸ್ತಿನ ಕ್ರಮವನ್ನು ಅವರು ಅನುಸರಿಸಬೇಕು ಎಂದು ಸರ್ಕಾರದವರು ಏನಾದರೂ ವಿಧಿಯನ್ನು ನಿಯಮಿಸಿದ್ದಾರೆಯೇ ?

ಶ್ರೀ ಆರ್. ಗುಂಡೂರಾವ್. —ಆ ದೃಷ್ಟಿಯಿಂದ ಈಗಾಗಲೇ ಸರ್ಕಾರ ಕ್ರಮ ಕೈಕೊಂಡಿದೆ ನಮ್ಮ ಬಸ್ಸಿನ ಡ್ರೈವರುಗಳು ಮತ್ತು ಕಂಡಕ್ಟರುಗಳು ಎಲ್ಲರೂ ಸಹ ಪ್ರಯಾಣಿಕರ ಜೊತೆಯಲ್ಲಿ ಬಹಳ ಸೌಜನ್ಯದಿಂದ ವರ್ತಿಸಬೇಕೆಂದು ಹೇಳಿ ಹಲವಾರು ಸಾರಿ ಆದೇಶಗಳನ್ನು ಕೊಟ್ಟಿದೆ. ಆದರೂ ಸಹ ಇಪ್ಪೊಂದು ದೊಡ್ಡ ಸಂಸ್ಥೆಗಳಲ್ಲಿ ಕೆಲವು ಕಡೆ ಅಂತಹ ಪ್ರಕರಣಗಳು ನಡೆದಾಗ ಅದಕ್ಕೆ ಕಾರ್ಪೊರೇಷನ್ ಗಮನಕ್ಕೆ ಬಂದಾಗ, ಸರ್ಕಾರದ ಗಮನಕ್ಕೆ ಬಂದಾಗ ಅಂತಹವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಎಂ. ಇಬ್ರಾಹಿಂ. — ಪ್ರತಿಯೊಂದು ಬಸ್ಸಿಗೂ ಇಷ್ಟೇ ಕಿಲೋಮೀಟರುಗಳನ್ನು ಓಡಿಸಬೇಕೆಂದು ನಿಗದಿ ಮಾಡುತ್ತಾರೆ. ೨ ಲಕ್ಷ ಕಿಲೋಮೀಟರ್, ೩ ಲಕ್ಷ ಕಿಲೋಮೀಟರುಗಳು ಎಂದು ಹೇಳಿ ನಿಗದಿ ಮಾಡುತ್ತಾರೆ. ಆಮೇಲೆ ಸರ್ಕಾರಿ ನೌಕರರ ರಿಟೈರ್‌ಮೆಂಟ್ ವಿಜನ್ನು ೫೮ ವರ್ಷ ಇದ್ದುದನ್ನು ೫೫ ಎಂದು ಮಾಡಿದ್ದಾರೆ. ಹೀಗಿರುವಾಗ ಕಂಡಕ್ಟರುಗಳು ಮತ್ತು ಡ್ರೈವರ್‌ಗಳು ೨ ಲಕ್ಷ ೩ ಲಕ್ಷ ಕಿಲೋಮೀಟರುಗಳಷ್ಟು ದೂರ ಬಸ್‌ಗಳನ್ನು ಓಡಿಸುವಾಗ ಬಸ್ಸಿನ ಸಾಮಾನುಗಳೇನಾದರೂ ಮುರಿದು ಹೋದರೆ ಅದನ್ನು ಅವರ ಸಂಬಳದಿಂದ ಮುರಿದುಕೊಳ್ಳುತ್ತಾರೆ ಎಂಬ ದೂರುಗಳು ಕೇಳಿ ಬರುತ್ತವೆ. ಇದು ನಿಜವೇ ?

ಶ್ರೀ ಆರ್. ಗುಂಡೂರಾವ್.—ಅಂತಹ ಪ್ರಕರಣಗಳು ನನ್ನ ಗಮನಕ್ಕೆ ಬಂದಿಲ್ಲ. ಅಂತಹವುಗಳನ್ನು ನನ್ನ ಗಮನಕ್ಕೆ ತಂದರೆ ನಾನು ಪರಿಶೀಲಿಸುತ್ತೇನೆ.

SRI G. B. SHANKARA RAO.—May I know from the Hon'ble Minister, that out of 498 buses how many have outlived their utility ?

SRI R. GUNDURAO.—They are all in running condition.

MR. SPEAKER.—Questions are over